ಹೇಳುತ್ತಿದ್ದಳು. ಆದರೆ ಶ್ರೀಕಂಠ ಅವಳ ಮಾತುಗಳಿಗೆ ಸೂಕ್ತವಾಗಿ ಪ್ರತಿಕ್ರಿಯಿಸದೇ ಜಾರಿಕೊಳ್ಳುತ್ತಿದ್ದ! ಸುರೇಶ ಹೇಳಿದಂತೆ ನನ್ನ ಹಣ ಮತ್ತು ಒಡವೆ ಖಾಲಿಯಾಗುವವರೆಗೂ ನನ್ನೊಡನೆ ಇದ್ದು ಆನಂತರ ನನ್ನನ್ನು ನಡು ನೀರಿನಲ್ಲಿ ಬಿಟ್ಟು ಹೋಗುವ ಹುನ್ನಾರ ಇದ್ದಿರಬಹುದೆ? ಕೇವಲ ಸುಖ ಅನುಭವಿಸಿ ನನ್ನ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರಸಿ, ಜನರೆದುರಿನಲ್ಲಿ ನನ್ನನ್ನು ನಡತೆಗೆಟ್ಟವಳು, ಗಂಡನನ್ನೇ ಬಿಟ್ಟುಬಂದವಳು ಎಂದು ತುಚ್ಛವಾಗಿ ಕಂಡು ದೂರಬಹುದು! ಅವನು ನನ್ನ ಜೊತೆ ಕೊನೆಯವರೆಗೂ ಜೀವನ ನಡೆಸದೇ ಇರಬಹುದು! ಇಂಥ ಅನೇಕ ಸಂಶಯಗಳು ಎದ್ದವು. ಇದೆಲ್ಲವನ್ನೂ ನೆನೆದು ತನಗೆ ಕವಿದಿದ್ದ ಭ್ರಮೆಯ ಪೊರೆಯನ್ನು ಕಳಚಿ ಭವಿಷ್ಯದ ಕಣ್ಣಿನಿಂದ ವಾಸ್ತವವಾಗಿ ಆಲೋಚಿಸಿದಳು.

ತುಂಬಾ ಹೊತ್ತಿನವರೆಗೂ ಬಹಳ ಚಿಂತಾಕ್ರಾಂತಳಾಗಿ ಒಬ್ಬಳೇ ಕುಳಿತಳು. ಕರಿವೀರನ ಮುಗ್ಧ ಮನಸ್ಸಿಗೆ ಮತ್ತು ಮಕ್ಕಳಿಗೆ ನಾನು ಇದುವರೆಗೂ ಮಾಡಿದ್ದು ದ್ರೋಹದ ಕೆಲಸ ಎನಿಸಿತು. ಆ ಕ್ಷಣವೇ ಮನಸ್ಸಿನ ಗೊಂದಲದಿಂದ ಹೊರಬಂದು ಅಳುತ್ತಿದ್ದ ಮಕ್ಕಳಿದ್ದಲ್ಲಿಗೆ ಓಡಿಬಂದು ತಬ್ಬಿ ಹಿಡಿದು ಗೋಳಾಡಿದಳು. ನಿಮ್ಮನ್ನು ಬಿಟ್ಟು ಇನ್ನೆಂದಿಗೂ ಹೋಗೋದಿಲ್ಲ, ನಾನು ಮಾಡಿದ ತಪ್ಪಿಗೆ ಏನೂ ಅರಿಯದ ನೀವುಗಳು ನೋವು ಅನುಭವಿಸುವಂತಾಯಿತು ಎಂದು ಗಟ್ಟಿಯಾಗಿ ಹೇಳುತ್ತಾ ಮರುಗಲು ಪ್ರಾರಂಭಿಸಿದಳು. ಮಳೆ, ಬಿರುಗಾಳಿ, ಹುಚ್ಚು ಪ್ರವಾಹದ ನಂತರ ಪ್ರಕೃತಿ ಸೌಮ್ಯವಾಗುವಂತೆ ಅವಳ ಹೃದಯ ಈಗ ಶಾಂತವಾಗಿತ್ತು. ಅವಳ ಎದೆಯಲ್ಲಿ ಅವಿತಿದ್ದ ಹೂವುಗಳು, ಹಕ್ಕಿಗಳು ಈಗ ಹೊರಬಂದು ಸಂತಸದಿಂದ ಜೀವ ತಳೆದವು.

ಪೊಲೀಸ್ ಅಧಿಕಾರಿಯು ಶ್ರೀಕಂಠನನ್ನು ಕರೆದು ಅವನ ಹೇಳಿಕೆ ದಾಖಲಿಸಿಕೊಳ್ಳಬೇಕೆಂದು ಅವನನ್ನು ಕರೆಯಲು ಪೇದೆಗೆ ಹೇಳಿದ್ದರಿಂದ ಜನರಿದ್ದಲ್ಲಿ ಬಂದು ಕೂಗಿದ. ಊರಿನ ಜನರೆದುರು ಅವಮಾನ ಆಗಿದ್ದರಿಂದ ಹೆಚ್ಚು ಹೊತ್ತು ಮುಖ ಕೊಟ್ಟು ಅವರೊಡನೆ ಮಾತನಾಡಲಾರದೇ ಆ ಜನಸಂದಣಿಯಿಂದ ಜಾಗ ಖಾಲಿ ಮಾಡಿದ. ಅಲ್ಲಿದ್ದ ಜನರು, ಹೆಂಗಸರೂ ಅವನನ್ನು ಎಷ್ಟೇ ಬೈದರೂ, ತಲೆತಗ್ಗಿಸಿಕೊಂಡು ಅನ್ನಪೂರ್ಣಳೇ ನನ್ನನ್ನು ಬಲವಂತದಿಂದ ಕರೆದುಕೊಂಡು ಹೋದಳೆಂದು ತಪ್ಪೆಲ್ಲವನ್ನೂ ಅನ್ನಪೂರ್ಣಳ ಮೇಲೆಯೇ ಹೊರಿಸಿದ. ಇನ್ನು ಮುಂದೆ ಆಕೆಯ ಕಡೆ ತಲೆಹಾಕದಂತೆ ಇರಬೇಕೆಂದು ಊರಿನವರು ತಾಕೀತು ಮಾಡಿದರು. ಹೇಳದೆ ಕೇಳದೆ ಓಡಿಹೋದ ಅವನನ್ನು ಹಿಡಿದು ತರಲು ಎಸ್‌ಐ ಪೊಲೀಸರಿಗೆ ಹೇಳಿದರು. ಇತ್ತ ಅನ್ನಪೂರ್ಣ ಮತ್ತು ಅಲ್ಲಿ ನೆರೆದಿದ್ದವರನ್ನು ಕುರಿತು ಯಾವುದೋ ಕೆಟ್ಟ ಘಳಿಗೆ ಏನೋ ನಡೆದು ಹೋಯಿತು. ನನ್ನಿಂದಾಗಿ ನನ್ನ ಮನೆಗೆ ಕೆಟ್ಟಹೆಸರು ಬರುವಂತಾಯಿತು. ಇನ್ನು ಮುಂದೆ ಗಂಡ, ಮಕ್ಕಳು ತಾಯಿ ಜೊತೆ ಜೀವನ ನಡೆಸುತ್ತೇನೆಂದು ತಪ್ಪೊಪ್ಪಿಗೆ ಹೇಳಿಕೆ ಕೊಟ್ಟಳು.

ಮನೆಗೆ ಬಂದು ವಾರವಾದರೂ ಹಾಸಿಗೆ ಬಿಟ್ಟು ಎದ್ದೇಳದೆ ಸರಿಯಾಗಿ ಊಟವೂ ಮಾಡದೇ ಅನ್ನಪೂರ್ಣ ಮನದಲ್ಲಿಯೇ ನರಳುತ್ತಿದ್ದಳು. ತಾನು ಎಂಥ ತಪ್ಪು ಮಾಡಿದೆ ಎನ್ನುವ ಅಪರಾಧಿ ಭಾವ ಅವಳ ಎದೆಯನ್ನು ದಹಿಸುತ್ತಿತ್ತು. ಮನೆಬಿಟ್ಟು ಹೋಗುವಾಗ ಇದ್ದ ಕಟು ಹೃದಯ ಈಗ ಬದಲಾಗಿತ್ತು. ಮನದಲ್ಲಿದ್ದ ತಪ್ಪಿನ ಭಾವದಿಂದಾಗಿ ಸಹಜ ಜೀವನಕ್ಕೆ ಮರಳಲು ಸಾಧ್ಯವಾಗುತ್ತಿಲ್ಲದಿರುವುದು



ಆಕೆ ಹಾಸಿಗೆ ಬಿಟ್ಟು ಎದ್ದೇಳಲಿಕ್ಕೆ ಆಗದ ಸ್ಥಿತಿ ತಲುಪಲಿಕ್ಕೆ ಕಾರಣವಾಗಿತ್ತು. ದೊಡ್ಡಮ್ಮ ಹನುಮಕ್ಕ, ಪದೇ ಪದೇ ಹೇಳುವ ಹಿತನುಡಿಗಳು ಕೇಳಿಸಿಯೂ ಕೇಳಿಸಿಲ್ಲದಂತೆ ಯಾವಾಗಲೋ ಒಮ್ಮೆ ಮಾತ್ರ ಊಂಗುಟ್ಟುತ್ತಿದ್ದಳು. ಹನುಮಕ್ಕಳ ಒತ್ತಾಯಕ್ಕೆ ಆಗೊಮ್ಮೆ ಈಗೊಮ್ಮೆ ಎದ್ದು ಮನೆ ಕೆಲಸ ಮಾಡುತ್ತಿದ್ದಳು. ಕರಿವೀರ ತೋಟ ಬಿಟ್ಟು ಊರಿನ ಮನೆಯ ಕಡೆ ಬರಲೇ ಇಲ್ಲ. ಅವನ ಕಾಲಿನಲ್ಲಿನ ಕುರುವಿನ ಹುಣ್ಣು ಬಲಿತು ಕೆಂಪಗೆ ಸುತ್ತು ಗಟ್ಟಿತ್ತು. ಕೀವು ತುಂಬಿ ಒಸರುತ್ತಿತ್ತು. ಯಾರೊ ಹೇಳಿದಂತೆ ಯಾವುದೋ ಗಿಡದ ಎಲೆ ಇಟ್ಟು ತುಂಡು ಬಟ್ಟೆಯನ್ನು ಕುರುವಿನ ಮೇಲೆ ಕಟ್ಟಿಕೊಂಡಿದ್ದ. ಅವನ ಅಕ್ಕಂದಿರು ದಿನವೂ ಹೋಗಿ ಸಮಾಧಾನದ